ಸಿಸಿನಂ.212/2022

ಡಿಡಬ್ಲ್ಯೂ:1

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 212/2022

ಡಿಡಬ್ಲೂ : 1

| | | |
|---|---|---|
| ಹೆಸರು | : | ಶ್ರೀ ಅಭಿನಂದನ |
| ತಂದೆಯ ಹೆಸರು | : | ಮಂಜುನಾಥ ಖಾರ್ವಿ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಮೀನುಗಾರಿಕೆ |
| ವಾಸ್ತವ್ಯ | : | ಬೆಳಂಬಾರ , ಅಂಕೋಲಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 10-04-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**ಮುಖ್ಯ ವಿಚಾರಣೆ : ಆರೋಪಿ ಪರವಾಗಿ : ಶ್ರೀ ಎಸ್ ಆರ್ ಎಸ್ ವಕೀಲರಿಂದ :**

ಫಿರ್ಯಾದುದಾರರು ನನಗೆ ಪರಿಚಯ ಇಲ್ಲ. ನೋಟಿಸು ಬಂದಾಗ ನನಗೆ ಫಿರ್ಯಾದುದಾರರ ಪರಿಚಯ ಇರಲಿಲ್ಲ. ನಾನು ಒಬ್ಬರ ಹತ್ತಿರ ಅವರ ನಂಬರನ್ನು ತೆಗೆದುಕೊಂಡು ಕಾಲ್ ಮಾಡಿದೆ . ಅವರು ಮಾತನಾಡಲಿಲ್ಲ. ಕೋರ್ಟಿಗೆ ಬಂದು ನೋಡಿಕೊ ಎಂದು ಹೇಳಿದರು . ಚೆಕ್ ಬೋನ್ಸ ಕೇಸ ಆದ್ದರಿಂದ ನಾನು ನೆನಪು ಮಾಡಿಕೊಂಡೆ . ಗುರು ರಮೇಶ ಖಾರ್ವಿಯವರ ಹತ್ತಿರ ನನ್ನ ವ್ಯವಹಾರ ಇತ್ತು . ನಾನು ಗುರು ರಮೇಶ ಖಾರ್ವಿಯವರ ಹತ್ತಿರ ನನ್ನ ಚೆಕ್ ಯಾರಿಗಾದರೂ ಕೊಟ್ಟಿದ್ದೀಯಾ ಎಂದು ಕೇಳಿದೆ . ಅವರು ನಾನು ಮಿಸ್ ಯ್ಯುಜ್ ಮಾಡಿಲ್ಲ ಎಂದು ಹೇಳಿದರು , ಆದರೂ ನನಗೆ ನೋಟಿಸು ಬಂದಿದ್ದರಿಂದ ಅನುಮಾನ ಬಂದಿತ್ತು . ಅವರ ಮನೆಗೆ ಹೋಗಿ ಗಲಾಟೆ ಮಾಡಿದಾಗ ಗುರು ರಮೇಶ ಖಾರ್ವಿಯವರು ಚೆಕ್ ನ್ನು ನಾನು ಒಬ್ಬರಿಗೆ ಕೊಟ್ಟಿದ್ದೇನೆ ಎಂದು ಒಪ್ಪಿಕೊಂಡರು . ರಾಜು ಮಾಸ್ತರ ಇವರಿಗೆ ಚೆಕ್ ನ್ನು ಕೊಟ್ಟಿದ್ದೇನೆ ಎಂದು ಒಪ್ಪಿಕೊಂಡರು . ಅದು ಕ್ಲಿಯರ್ ಆಗಿದೆ , ಚೆಕ್ ರಿಟರ್ನ ಸಿಗುತ್ತದೆ ಎಂದು

ಹೇಳುವಷ್ಟರಲ್ಲಿ ಕರೋನಾ ಬಂದು ರಾಜು ಮಾಸ್ತರವರ ಮರಣ ಹೊಂದಿದರು . ಚೇತನ ಗೋವಿಂದ ನಾಯ್ಕ ಇವರು ನನ್ನ ಚೆಕ್ ನ್ನು ಯಾಕೆ ಹಾಕಿದ್ದಾರೆ ಎಂದು ಗುರು ರಮೇಶ ಖಾರ್ವಿ ಯವರಿಗೆ ಕೇಳಿದಾಗ ಅವರು ಅವರ ಬಾವ ಎಂದು ಹೇಳಿದ್ದಾರೆ . ಅವರೇ ವ್ಯವಹಾರ ಪೂರ್ವಕವಾಗಿ ಅದನ್ನು ಮಿಸ್ ಯ್ಯುಜ್ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ . ನನ್ನ ಚೆಕ್ ಮಿಸ್ ಯುಜ್ ಆದ ಬಗ್ಗೆ ನಾನು ಚೇತನ ಗೋವಿಂದ ನಾಯ್ಕ ಇವರಿಗೆ ಮಾತನಾಡುವಾ ಎಂದು ಮನೆಗೆ ಬರುತ್ತೇನೆ ಎಂದು ಹೇಳಿದೆ . ಅವರು ಗೋಕರ್ಣ ಕ್ರಾಸ್ ರೋಡ್ ನಲ್ಲಿರುವ ಹೊಟೆಲ್ ಗೆ ಬರಲು ಹೇಳಿದರು. ಅಲ್ಲಿ ನಾನು ಕೇಳಿದೆ , ಇದುನನಗೆ ಸಂಬಂಧವಿಲ್ಲದ ವ್ಯವಹಾರ , ಗುರು ರಮೇಶ ಖಾರ್ವಿ ಮತ್ತು ನಿಮಗೆ ಸಂಬಂಧಪಟ್ಟ ವಿಷಯ , ಆ ಕಾರಣ ಚೆಕ್ ನ್ನು ನನಗೆ ಕೊಟ್ಟು ನಿಮ್ಮ ವ್ಯವಹಾರವನ್ನು ನೋಡಿಕೊಳ್ಳಿ ಎಂದು ಹೇಳಿದೆ . ಆಗ ಗುರು ರಮೇಶ ಖಾರ್ವಿಯವರು ಚೇತನ ನಾಯ್ಕರವರಿಗೆ ನಾನು ವ್ಯವಹಾರವನ್ನು ಬಾವನ ಹತ್ತಿರ ಮುಗಿಸಿದ್ದೇನೆ. ಮತ್ತೇ ಯಾಕೆ ಚೆಕ್ ನ್ನು ಮಿಸ್ ಯುಜ್ ಮಾಡಿದ್ದೀರಿ ಎಂದು ಕೇಳಿದರು. ಆಗ ನಾನು ಇದಕ್ಕೂ ನನಗೂ ಸಂಬಂಧವಿಲ್ಲ , ಚೆಕ್ ನ್ನು ಮಿಸ್ ಮಾಡಿಕೊಂಡಿದ್ದೀರಿ ಅದಕ್ಕೆ ಅದನ್ನು ಬಗೆಹರಿಸಿಕೊಳ್ಳಿ ಎಂದು ಹೇಳಿದೆ . ಆಗ ಚೇತನ ಗೋವಿಂದ ನಾಯ್ಕ ನನ್ನ ಇಂಟರೆಸ್ಟ ಬಹಳ ಆಗಿದೆ , ಅಸಲು ಮಾತ್ರ ಬಂದಿದೆ , ಬಡ್ಡಿ ಬಂದಿಲ್ಲ ಎಂದು ಹೇಳಿದರು. ಆಗ ಗುರು ರಮೇಶ ಖಾರ್ವಿಯವರು ನಾನು ಒಂದು ಲಕ್ಷ ಕೊಡುತ್ತೇನೆ ಅವರ ಚೆಕ್ ನ್ನು ಕೊಟ್ಟು ಬಿಡಿ ಎಂದು ಚೇತನ ನಾಯ್ಕರವರಿಗೆ ಹೇಳಿದರು. ಆಗ ಚೇತನ ನಾಯ್ಕರವರು ಒಂದು ಲಕ್ಷ ರೂಪಾಯಿ ಆಗುವುದಿಲ್ಲ , ಒಂದು ಲಕ್ಷದ ಎಂಬತ್ತು ಸಾವಿರ ರೂಪಾಯಿ ಕೊಡಿ ಎಂದು ಕೇಳಿದರು. ಆಗ ಚರ್ಚೆ ಆಯಿತು , ನನ್ನ ಚೆಕ್ ಮಿಸ್ ಯುಜ್ ಆಗಿತ್ತು , ಕಾರಣ ಸೆಟ್ಲಮೆಂಟ್ ಮಾಡಿ ಮುಗಿಸಿ ಬಿಡಿ ಹಾಗೂ ಕಡಿಮೆ ಮಾಡಿ ಎಂದು ನಾನು ಹೇಳಿದೆ . ರೂ, 1,20,000/- ರೂ. ಗಳಿಗೆ ಸೆಟ್ಲಮೆಂಟ್ ಆಗಿತ್ತು ನಂತರ ವಕೀಲರ ಫೀಸ್ ಹಾಗೂ ಇತರ ಖರ್ಚಿಗೆ ಎಂದು 1,40,000/- ರೂ.ಗಳಿಗೆ ಸೆಟ್ಲಮೆಂಟ್ ಆಯಿತು ಹಾಗೂ ಗುರು ರಮೇಶ ಖಾರ್ವಿ ಎರಡು ತಿಂಗಳ ಟೈಮ್ ನ್ನು ತೆಗೆದುಕೊಂಡರು. ಎರಡು ತಿಂಗಳು ಬಿಟ್ಟರೆ ಮೂರು ತಿಂಗಳಲ್ಲಿ ಹಣವನ್ನು

ಕೊಡುವುದಾಗಿ ತಿಳಿಸಿದರು. ಹಣ ಕೊಡದಿದ್ದರೆ ಈ ಕೇಸನ್ನು ನಡೆಸುತ್ತಾ ಇರುತ್ತೇನೆ , ಬಿಡುವುದಿಲ್ಲ ಎಂದು ಚೇತನ ನಾಯ್ಕರವರು ಹೇಳಿದರು. ಇಷ್ಟೇ ನಡೆದಿತ್ತು . ಅವರಿಬ್ಬರ ನಡುವೆ ನಡೆದ ವ್ಯವಹಾರ ನಾನು ನೋಡಿಲ್ಲ. ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.